ಅ) ಆಗಿನ ತಾಲ್ಲೂಕು ಅಭಿವೃದ್ಧಿ ಮಂಡಲಿಯ ಅಧ್ಯಕ್ಷರು ಮಂತ್ತು ಸದಸ್ಯರೇ ಆ ಕಟ್ಟಡವನ್ನು ಪಶುಸಂಗೋಪನಾ ಖಾತೆಗೆ ಹಸ್ತಾಂತರಿಸಿ ಕೊಡುವ ಬಗ್ಗೆ ತರಾವು ಮಾಡಿದ್ದರೆ ?

ಆ) ಹಾಗೆ ತರಾವು ಇದ್ದಾಗ ಪಶುಸಂಗೋಪನಾ ಇಲಾಖೆಗೆ ಯಾಕೆ ಹಸ್ತಾಂತರಿಸಿಲ್ಲ ?

ಈ) ಕೊಡಲೇ ಹಸ್ತಾಂತರಿಸಲು ಕ್ರಮ ಕೈಕೊಳ್ಳಲಾಗುವುದೇ ?

ಶ್ರೀ ಸಿದ್ಧರಾಮಯ್ಯ (ಪಶುಸಂಗೋಪನಾ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು) —

ಅ) ೧೯೬೦-೬೧ನೇ ಸಾಲಿನಲ್ಲಿ.

ಆ) ಹೌದು.

ಇ) ಈ ಬಗ್ಗೆ ಮಾಹಿತಿ ಇಲ್ಲ.

ಈ) ಕಟ್ಟಡವನ್ನು ಇಲಾಖೆಗೆ ಹಸ್ತಾಂತರಿಸುವ ವಿಷಯದಲ್ಲಿ ಪರಿಶೀಲಿಸಿ ನಂತರ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಚಿಕ್ಕಮಗಳೂರು ಗುಡ್ಡಗಾಡು ಪ್ರದೇಶಗಳಲ್ಲಿ ಕುಡಿಯುವ ನೀರಿನ ಬಗ್ಗೆ.

೧೭೦೫. ಐ. ಬಿ. ಶಂಕರ (ಚಿಕ್ಕಮಗಳೂರು).—ಮಾನ್ಯ ಗ್ರಾಮೀಣ ಅಭಿವೃದ್ಧಿ ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿಕ್ಕಮಗಳೂರು ಗುಡ್ಡಗಾಡು ಪ್ರದೇಶಗಳಲ್ಲಿ ಹರಿಯುವ ಝರಿ ಹಳ್ಳ ತೊರೆಗಳ ನೀರನ್ನು ಕುಡಿಯಲು ಉಪಯೋಗಿಸಿ ಕೊಳ್ಳಬಹುದಾದ ವಿಚಾರ ಸರ್ಕಾರದವರ ಗಮನದಲ್ಲಿದೆಯೆ ?

ಆ) ಹಾಗಿದ್ದಲ್ಲಿ ಎತ್ತರ ಪ್ರದೇಶಗಳಲ್ಲಿ ಹರಿಯುವ ನೀರನ್ನು ಕುಡಿಯಲು ಸರಬರಾಜು ಮಾಡದಿರುವುದಕ್ಕೆ ಕಾರಣವೇನು ?

ಇ) ಹೆಚ್ಚು ವೆಚ್ಚವಿಲ್ಲದೇ ಗ್ರಾಮಾಂತರ ಪ್ರದೇಶಗಳಿಗೆ ನಲ್ಲಿಗಳಲ್ಲಿ ನೀರನ್ನು ಸರಬರಾಜು ಮಾಡುವ ಯೋಜನೆಯನ್ನು ಕೈಗೊಂಡು ತ್ವರಿತವಾಗಿ ಪೂರ್ತಿಗೊಳಿಸಲಾಗುವುದೆ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಚಿವರು).—

ಅ) ಇದೆ.

ಆ) ಝರಿ, ಹಳ್ಳ ಮತ್ತು ತೊರೆಗಳಲ್ಲಿ ಹರಿಯುವ ನೀರನ್ನು ಜಲಮೂಲವಾಗಿ ಪರಿಗಣಿಸುವ ಮುಂಚೆ ಆಲ್ಲಿಯ ಅವಲಂಬಿಸಬಹುದಾದ ನೀರಿನ ಉತ್ಪನ್ನವನ್ನು ಅಳೆಯಬೇಕು, ಮತ್ತು ಆರೋಗ್ಯ ಕಂಟಕಗಳನ್ನು ತಪ್ಪಿಸುವ ದೃಷ್ಟಿಯಿಂದ ನೀರಿನ ಪಟ್ಟವನ್ನು ರಾಸಾಯನಿಕ ಹಾಗೂ ಅಣುಜೀವಿ (ಬ್ಯಾಕ್ಟೀರಿಯಾಜಿಕಲ್) ಪರೀಕ್ಷೆಗೆ ದೀರ್ಘಕಾಲ ಒಳಪಡಿಸಿ ಮುಂದುವರೆಯಬೇಕು. ಈ ದಿಸೆಯಲ್ಲಿ ಪ್ರಯೋಗಾರ್ಥವಾಗಿ ಕೆಲವು ಯೋಜನೆಗಳನ್ನು ನಿಯೋಜಿಸಲಾಗುತ್ತಿದೆ.

ಇ) ಹೆಚ್ಚು ವೆಚ್ಚವಿಲ್ಲದೆ ಕಿರುನೀರು ಸರಬರಾಜು ಯೋಜನೆಗಳನ್ನು ವಿವಿಧ ಕಾರ್ಯಕ್ರಮಗಳಲ್ಲಿ ತ್ವರಿತವಾಗಿ ಪೂರ್ತಿಗೊಳಿಸಲಾಗುತ್ತಿದೆ.

Number of State Awards granted to Teachers during present Government.

1645. SRI P. C. MUNISWAMAIAH (Devanahalli).—Will the Minister for Education be pleased to State ?

a) Number of State Awards granted to Teachers duirng present Government ?

b) Out of that number of Primary School Teachers? and number of S.C., S.T.

SRI M. RAGUPATHI (Minister for Education).—

a) 35 (Thirty Five)

b) 23 (Twenty Three) On the basis of Caste, Awards will not be given. Hence, S C., S.T. figures are not available.

೧೫೪೫. ಶ್ರೀ ಜಿ. ಎಸ್. ಆಚಾರ್, ಬ್ಲೋಷಿಯಂಸ್ ಡಿಸೋಜ ಮತ್ತು ಮಲ್ಲಿಕಾರ್ಜುನಖರ್ಗೆ (ಗುರುಮಿಂಟಿಕಲ್).—ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೇ ದಯವಿಟ್ಟು ಉತ್ತರಿಸುವರೆ?

ಅ) ದ್ವಿತೀಯ ಪಿ.ಯು.ಸಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಐದು ತಿಂಗಳು ಪ್ರಾಯೋಗಿಕ ಶಿಕ್ಷಣ ಪಡೆದವರನ್ನು ಪ್ರಾಥಮಿಕ ಶಾಲಾ ಉಪಾಧ್ಯಾಯರಾಗಲು ಅರ್ಹರೆಂದು ಸರ್ಕಾರದವರು ಘೋಷಿಸಿರುವುದು ನಿಜವೇ?

ಆ) ಹಾಗಿದ್ದಲ್ಲಿ, ೨೯-೧೦-೧೯೮೫ ರಂತೆ ದ್ವಿತೀಯ ಪಿ.ಯು.ಸಿ. ಪಾಸಾದ ೧೨ ತಿಂಗಳು ಪ್ರಾಯೋಗಿಕ ಶಿಕ್ಷಣ ಪಡೆದಿರಬೇಕೆಂದು ತಿದ್ದುಪಡಿಯಿಂದ ಅನೇಕ ಮಂದಿ ೫ ತಿಂಗಳ ತರಬೇತಿ ಹೊಂದಿರುವವರಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಕೊಂಡ ಕ್ರಮವೇನು?

ಶ್ರೀ ಎಂ. ರಘುಪತಿ (ಮಾನ್ಯ ಶಿಕ್ಷಣ ಮಂತ್ರಿಗಳು).—

ಅ) ಆ ರೀತಿ ಹೊರಡಿಸಿದ್ದ ಆದೇಶವನ್ನು ವಾಪಸ್ಸು ಪಡೆಯಲಾಗಿದೆ.

ಆ) ಹೌದು.

ಇ) ಸರ್ಕಾರವು ಈಗಾಗಲೇ ಆದೇಶವನ್ನು ಮಾರ್ಪಡಿಸಿ ಸದರಿ ೧೨ ತಿಂಗಳ ಇಂಟರ್ನ್‌ಶಿಪ್ ಕೋರ್ಸನ್ನು ೧೯೮೬-೮೭ ರಿಂದ ಜಾರಿಗೆ ಬರುವಂತೆ ಹೊರಡಿಸಿದೆ.

ಔರಾದ್ ತಾಲ್ಲೂಕಿನಲ್ಲಿ ನಿರ್ಮಿಸಲಾದ ಶಾಲಾ ಕಟ್ಟಡಗಳ ಬಗ್ಗೆ.

೧೫೫೭. ಶ್ರೀ ಗುರುಪಾದಪ್ಪ (ನಾಗಮಾರಹಳ್ಳಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ೧೯೮೫-೮೬, ೧೯೮೬-೮೭, ೧೯೮೭-೮೮ನೇ ಸಾಲಿನಲ್ಲಿ ಔರಾದ್ ತಾಲ್ಲೂಕಿನಲ್ಲಿ ಎಷ್ಟು ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ಕಟ್ಟಡಗಳನ್ನು ಕಟ್ಟಲಾಗಿದೆ ಹಾಗೂ ಆವ ಯಾವ ಹಂತದಲ್ಲಿದೆ.

ಆ) ಇವುಗಳಲ್ಲಿ ಶಾಲೆ ನಡೆಯುವ ಸ್ಥಿತಿಯಲ್ಲಿರುವ ಹಾಗೂ ನಡೆಸಲಾರದ ಸ್ಥಿತಿಯಲ್ಲಿರುವ ಶಾಲೆಗಳ ಸಂಖ್ಯೆ ಎಷ್ಟು?

ಇ) ಔರಾದ್ ತಾಲ್ಲೂಕಿನಲ್ಲಿ ಶಾಲೆಗಳು ಇಲ್ಲದಿರುವ ಗ್ರಾಮ ಹಾಗೂ ತಾಂಡಗಳ ಸಂಖ್ಯೆ ಎಷ್ಟು ಹಾಗೂ ಶಿಕ್ಷಕರು ಇಲ್ಲದ ಶಾಲೆಗಳ ಸಂಖ್ಯೆ ಎಷ್ಟು?